# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಡಾ : ಚಂದ್ರಶೇಖರ್ ಬ.ಪಾಟೀಲ್ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **714** |
| ಉತ್ತರಿಸಬೇಕಾದ ದಿನಾಂಕ | : | 22.02.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಯೋಜನೆ ಅಡಿಯಲ್ಲಿ ಬರುವ ಯೋಜನೆಗಳಾವುವು; (ವಿವರ ನೀಡುವುದು) | ವಿವಿಧ ವಸತಿ ಯೋಜನೆಗಳಡಿ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಜ್ಯ ಸರ್ಕಾರದ ಪ್ರಾಯೋಜಕತ್ವದ ಯೋಜನೆಗಳು :-<br>1. ಬಸವ ವಸತಿ ಯೋಜನೆ<br>2. ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ & ನಗರ)<br>3. ದೇವರಾಜು ಅರಸು ವಸತಿ ಯೋಜನೆ(ಗ್ರಾಮೀಣ & ನಗರ)<br>4. ವಾಜಪೇಯಿ ನಗರ ವಸತಿ ಯೋಜನೆ<br>5. ಮುಖ್ಯ ಮಂತ್ರಿಗಳ ಬಹುಮಹಡಿ ಬೆಂಗಳೂರು ವಸತಿ ಯೋಜನೆ(ಬೆಂಗಳೂರು ಜಿಲ್ಲೆಯಲ್ಲಿ ಮಾತ್ರ)<br><br>ಕೇಂದ್ರ ಸರ್ಕಾರದ ಪ್ರಾಯೋಜಕತ್ವದ ಯೋಜನೆಗಳು :-<br>1. ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)<br>2. ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) |
| ಆ) | ಬೀದರ್ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ವಿವಿಧ ಯೋಜನೆ ಅಡಿಯಲ್ಲಿ ಮಂಜೂರಾದ ಮನೆಗಳು ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು) | ಬೀದರ್ ಜಿಲ್ಲೆಯಲ್ಲಿ 2020-21 ರಿಂದ 2021-22 ರವರೆಗೆ ವಿವಿಧ ವಸತಿ ಯೋಜನೆಯಡಿ 7,598 ಮನೆಗಳನ್ನು ಮಂಜೂರು ಮಾಡಲಾಗಿದೆ.<br><br>ತಾಲ್ಲೂಕವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ವಸತಿ ಮನೆಗಳನ್ನು ಪಡೆದುಕೊಳ್ಳಲು ಸರ್ಕಾರದ ಮಾನದಂಡಗಳೇನು; (ವಿವರ ನೀಡುವುದು) | ವಿವಿಧ ವಸತಿ ಯೋಜನೆಗಳಡಿ ವಸತಿ ಸೌಲಭ್ಯವನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳು ಕೆಳಕಂಡಂತಿದೆ.<br>• ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ). ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.<br>• ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು,ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ ರೂ.1,20,000/- ಹಾಗೂ ನಗರ ಪ್ರದೇಶದಲ್ಲಿ ರೂ.2,00,000/- ಲಕ್ಷಗಳ ಒಳಗಿರಬೇಕು.<br>• ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದ್ಯಸರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.<br>• ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ |

| | | |
|---|---|---|
| | | ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕು/ಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)<br>• ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>• ವಿವಿಧ ವಸತಿ ಯೋಜನೆಗಳಡಿ ವಸತಿ ಸೌಲಭ್ಯ ಪಡೆಯಲು 2018ರ ವಸತಿ/ನಿವೇಶನ ರಹಿತರ ಪಟ್ಟಿಯಲ್ಲಿ ಹೆಸರು ಸೇರಿರಬೇಕು.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)ಯಡಿ ಫಲಾನುಭವಿಗಳನ್ನು ಗುರುತಿಸಲು/ಆಯ್ಕೆ ಮಾಡುವ ಮಾನದಂಡ ಕೆಳಕಂಡಂತಿದೆ.<br><br>1. ಒಂದು ಕುಟುಂಬವೆಂದರೆ ಗಂಡ, ಹೆಂಡತಿ ಮತ್ತು ಅವಿವಾಹಿತ ಮಕ್ಕಳು. ಕುಟುಂಬದ ವಯಸ್ಕ ಮಕ್ಕಳು (ವಿವಾಹಿತ/ಅವಿವಾಹಿತ) ಪಿಎಂ.ಎ.ವೈ(ಯು) ಅಡಿ ವಸತಿ ಸೌಲಭ್ಯ ಪಡೆಯಬಹುದಾಗಿದೆ.<br>2. ಫಲಾನುಭವಿಯ ಕುಟುಂಬವು ಅವನ / ಅವಳ ಹಾಗೂ ಕುಟುಂಬದ ಸದಸ್ಯರ ಹೆಸರಿನಲ್ಲಿ ದೇಶದ ಯಾವುದೇ ಭಾಗದಲ್ಲಿ ಪಕ್ಕಾ ಮನೆಯನ್ನು ಹೊಂದಿರಬಾರದು.<br>3. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ರೂ.3.00 ಲಕ್ಷದ ಒಳಗಿರಬೇಕು.<br>4. ಇತರೇ ವಸತಿ ಯೋಜನೆಗಳಲ್ಲಿ ಈಗಾಗಲೇ ಸಹಾಯಧನ ಪಡೆದಿರಬಾರದು.<br>5. ಫಲಾನುಭವಿಯು ಈಗಾಗಲೇ 21 ಚ.ಮೀ ಗಿಂತ ಕಡಿಮೆ ವಿಸ್ತೀರ್ಣ ಇರುವ ಪಕ್ಕಾ ಮನೆಯನ್ನು ಹೊಂದಿದ್ದರೂ ಸಹ 30 ಚ.ಮೀ ವರೆಗೆ ವಿಸ್ತರಣೆ ಮಾಡಿಕೊಳ್ಳಲೂ ಸಹ ಅವಕಾಶ ಇರುತ್ತದೆ. |
| ಈ) | ಕೆಲವು ಜಿಲ್ಲೆಗಳಲ್ಲಿ 2-3 ಭಾರಿ ಮನೆಗಳಿಗೆ ಅರ್ಜಿ ಸಲ್ಲಿಸದ್ದರೂ ಜನರಿಗೆ ಮನೆ ಹಂಚಿಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ನಿವೇಶನ ಹಂಚಿಕೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು ? (ಮಾಹಿತಿ ನೀಡುವುದು) | ಪ್ರತಿ ವರ್ಷ ಆಯವ್ಯಯದಲ್ಲಿ ನಿಗಧಿಪಡಿಸುವ ಅನುದಾನಕ್ಕೆ ಅನುಗುಣವಾಗಿ ವಿವಿಧ ವಸತಿ ಯೋಜನೆಗಳಡಿ ಗ್ರಾಮ ಪಂಚಾಯತಿವಾರು/ಸ್ಥಳೀಯ ಸಂಸ್ಥೆಗಳವಾರು ಮನೆಗಳ ಗುರಿ ನಿಗದಿಪಡಿಸಿ ಗ್ರಾಮ ಸಭೆ/ಆಶ್ರಯ ಸಮಿತಿಗಳ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಂತ ಹಂತವಾಗಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ಕ್ರಮವಹಿಸಲಾಗುತ್ತಿದೆ.<br><br>2021-22 ನೇ ಗ್ರಾಮೀಣ ಪ್ರದೇಶದ ಗ್ರಾಮ ಪಂಚಾಯಿತಿಗಳಿಗೆ A, B, C ಎಂದು ವರ್ಗೀಕರಿಸಿ ತಲಾ 50, 40, 30 ರಂತೆ ಗುರಿ ನೀಡಿದ್ದು, ಹಾಗೂ ನಗರ ಪ್ರದೇಶದ ನಗರ ಸ್ಥಳೀಯ ಸಂಸ್ಥೆಗಳಿಗೆ ಪಟ್ಟಣ ಪಂಚಾಯಿತಿ-50, ಪುರಸಭೆ-75, ನಗರಸಭೆ-100 ಹಾಗೂ ಮಹಾನಗರ ಪಾಲಿಕೆಗಳಿಗೆ-300 ರಂತೆ ಗುರಿ ನೀಡಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯ ಪ್ರಗತಿಯಲ್ಲಿದೆ. |

ಸಂಖ್ಯೆ :ವಇ 87 ಹೆಚ್‌ಎಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು

ಅನುಬಂಧ

ಬೀದರ್ ಜಿಲ್ಲೆಗೆ ಕಳೆದ 2 ವರ್ಷಗಳಲ್ಲಿ ಅಂದರೆ 2020-21 ರಿಂದ 2021-22ರವರೆಗೆ ವಿವಿಧ ವಸತಿ ಯೋಜನೆಯಡಿ ಮಂಜೂರಾಗಿರುವ ಮನೆಗಳ ತಾಲ್ಲೂಕು/ನಗರ ಸ್ಥಳೀಯ ಸಂಸ್ಥೆವಾರು ವಿವರ:

| ಜಿಲ್ಲೆ | ತಾಲ್ಲೂಕು | ಯೋಜನೆ | ಶ್ರೇಣಿ | ಮಂಜೂರಾದ ಮನೆಗಳು |
|---|---|---|---|---|
| Bidar | Aurad | Basava Housing Scheme | 2021-2022 | 457 |
| Bidar | Aurad | Dr.B.R Ambedkar Nivas Yojana Rural | 2021-2022 | 150 |
| | **Aurad Total** | | | **607** |
| Bidar | Aurad TP | Dr.B.R Ambedkar Nivas Yojana Urban | 2021-2022 | 12 |
| Bidar | Aurad TP | Vajpayee Urban Housing Scheme | 2021-2022 | 38 |
| Bidar | Aurad TP | AHP | 2021-2022 | 350 |
| | **Aurad TP Total** | | | **400** |
| Bidar | Basavakalyana | Basava Housing Scheme | 2021-2022 | 794 |
| Bidar | Basavakalyana | Dr.B.R Ambedkar Nivas Yojana Rural | 2021-2022 | 269 |
| | **Basavakalyana Total** | | | **1063** |
| Bidar | Basavakalyana CMC | Dr.B.R Ambedkar Nivas Yojana Urban | 2021-2022 | 14 |
| Bidar | Basavakalyana CMC | Vajpayee Urban Housing Scheme | 2021-2022 | 75 |
| Bidar | Basavakalyana CMC | BLC Non Convergence | 2021-2022 | 23 |
| | **Basavakalyana CMC Total** | | | **112** |
| Bidar | Bhalki | Basava Housing Scheme | 2021-2022 | 560 |
| Bidar | Bhalki | Dr.B.R Ambedkar Nivas Yojana Rural | 2021-2022 | 178 |
| | **Bhalki Total** | | | **738** |
| Bidar | Bhalki TMC | Dr.B.R Ambedkar Nivas Yojana Urban | 2021-2022 | 18 |
| Bidar | Bhalki TMC | Vajpayee Urban Housing Scheme | 2021-2022 | 57 |
| | **Bhalki TMC Total** | | | **75** |
| Bidar | Bidar | Basava Housing Scheme | 2021-2022 | 776 |
| Bidar | Bidar | Dr.B.R Ambedkar Nivas Yojana Rural | 2021-2022 | 288 |
| | **Bidar Total** | | | **1064** |
| Bidar | Bidar CMC | Dr.B.R Ambedkar Nivas Yojana Urban | 2021-2022 | 24 |
| Bidar | Bidar CMC | Vajpayee Urban Housing Scheme | 2021-2022 | 70 |
| Bidar | Bidar CMC | AHP | 2021-2022 | 750 |
| | **Bidar CMC Total** | | | **844** |
| Bidar | Chitguppa | Basava Housing Scheme | 2021-2022 | 338 |
| Bidar | Chitguppa | Dr.B.R Ambedkar Nivas Yojana Rural | 2021-2022 | 122 |
| | **Chitguppa Total** | | | **460** |
| Bidar | Chitguppa TMC | Dr.B.R Ambedkar Nivas Yojana Urban | 2021-2022 | 18 |
| Bidar | Chitguppa TMC | Vajpayee Urban Housing Scheme | 2021-2022 | 57 |
| | **Chitguppa TMC Total** | | | **75** |
| Bidar | Hallikheda TMC | Dr.B.R Ambedkar Nivas Yojana Urban | 2021-2022 | 18 |
| Bidar | Hallikheda TMC | Vajpayee Urban Housing Scheme | 2021-2022 | 57 |
| Bidar | Hallikheda TMC | BLC Non Convergence | 2021-2022 | 61 |
| | **Hallikheda TMC Total** | | | **136** |
| Bidar | Hulsoor | Basava Housing Scheme | 2021-2022 | 179 |
| Bidar | Hulsoor | Dr.B.R Ambedkar Nivas Yojana Rural | 2021-2022 | 59 |
| | **Hulsoor Total** | | | **238** |
| Bidar | Humnabad | Basava Housing Scheme | 2021-2022 | 497 |
| Bidar | Humnabad | Dr.B.R Ambedkar Nivas Yojana Rural | 2021-2022 | 161 |
| | **Humnabad Total** | | | **658** |
| Bidar | Humnabad TMC | Dr.B.R Ambedkar Nivas Yojana Urban | 2021-2022 | 18 |
| Bidar | Humnabad TMC | Vajpayee Urban Housing Scheme | 2021-2022 | 57 |
| Bidar | Humnabad TMC | AHP | 2021-2022 | 500 |
| | **Humnabad TMC Total** | | | **575** |
| Bidar | Kamalnagar | Basava Housing Scheme | 2021-2022 | 418 |
| Bidar | Kamalnagar | Dr.B.R Ambedkar Nivas Yojana Rural | 2021-2022 | 135 |
| | **Kamalnagar Total** | | | **553** |
| **Bidar Total** | | | | **7598** |